# ಬಿಬಿಎಂಪಿಯ ಹಣಕಾಸು ನಿರ್ವಹಣೆಗೆ ಹಿನ್ನೆಲೆ

ಕರ್ನಾಟಕ ಮುನ್ಸಿಪಲ್ ಕಾರ್ಪೊರೇಶನ್ಸ್ ಆಕ್ಟ್, ೧೯೭೬ (ಕೆ.ಎಂ.ಸಿ.ಎ) ಯ ಅಡಿಯಲ್ಲಿ, ಆಸ್ತಿಗಳ ಮೇಲೆ ತೆರಿಗೆ ಮತ್ತು ಸೆಸ್ ಗಳನ್ನು ಸಂಗ್ರಹಿಸುವುದು, ತನ್ನದೇ ಆದ ಆಸ್ತಿಗಳ ಮೇಲೆ ಬಾಡಿಗೆ ಗಳಿಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಖಾಸಗಿ ಜಾಹೀರಾತಿನಿಂದ ಆದಾಯವನ್ನು ಗಳಿಸುವ ಮೂಲಕ ಮೂಲ ನಾಗರಿಕ ಸೌಲಭ್ಯಗಳನ್ನು ಒದಗಿಸಿ ಆಡಳಿತ ನಡೆಸಲು ಬಿಬಿಎಂಪಿಯು ಬದ್ಧವಾಗಿದೆ. ಬೆಂಗಳೂರು ಒಂದು ಐಟಿ ಹಬ್ ಮತ್ತು ಬೆಳೆಯುತ್ತಿರುವ ಮಹಾನಗರವಾಗಿರುವುದರಿಂದ, ನಾಗರಿಕ ಸೇವೆಗಳನ್ನು ನಿರ್ವಹಿಸಲು ಸಾಕಷ್ಟು ಆದಾಯವನ್ನು ಸಂಗ್ರಹಿಸಲು ಅವಕಾಶವಿದೆ. ಇದಕ್ಕಾಗಿ ರಾಜ್ಯ ಸರಕಾರವನ್ನು ಅವಲಂಬಿಸುವ ಅಥವಾ ಸಾಲ ಪಡೆಯುವ ಅಗತ್ಯವಿಲ್ಲ. ಆದರೆ, ಬಿಬಿಎಂಪಿಯ ಹಣಕಾಸಿನ ಆಡಳಿತ ಸಂಪೂರ್ಣವಾಗಿ ಹದಗೆಟ್ಟಿದೆ.

- **ಯಾವಾಗಲೂ, ಆದಾಯ ಮತ್ತು ವೆಚ್ಚ, ಬಜೆಟ್ ಗಿಂತ ತೀರ ಕಡಿಮೆ:** 2019-20ನೇ ಸಾಲಿನ ಬಿಬಿಎಂಪಿಯ ಬಜೆಟ್ ವೆಚ್ಚ ಅಂದಾಜು ರೂ. 11,650 ಕೋಟಿ. ಆಸ್ತಿ ತೆರಿಗೆ, ಇತರ ಆದಾಯ ಮತ್ತು ಸರ್ಕಾರಿ ಅನುದಾನದ ಮೂಲಕ ಇದನ್ನು ಭರಿಸಲು ಯೋಜಿಸಲಾಗಿದೆ. ಆದರೆ, ಬಿಬಿಎಂಪಿ ಆದಾಯ ಮತ್ತು ಸಂಗ್ರಹಣೆಗಳು ಗುರಿಯಿಂದ ಗಮನಾರ್ಹವಾಗಿ ಕಡಿಮೆಯಾಗುತ್ತವೆ ಎಂದು ಇತಿಹಾಸ ತೋರಿಸುತ್ತದೆ.
- **ಬಿಬಿಎಂಪಿಯಲ್ಲಿ ರಾಜ್ಯ ಸರಕಾರದ ಹಾಗೂ ಶಾಸಕರ ಹಸ್ತಕ್ಷೇಪ:** ಬಿಬಿಎಂಪಿಯ ಆದಾಯ ಮತ್ತು ಶುಲ್ಕಸಂಗ್ರಹಣೆಯಲ್ಲಿ ಸತತವಾಗಿ ಕೊರತೆಯನ್ನು ನೋಡಿದರೆ, ಸರಕಾರದ ಮೇಲೆ ಬಿಬಿಎಂಪಿಯ ಅವಲಂಬನೆಯನ್ನು ಹೆಚ್ಚಿಸಲು ಉದ್ದೇಷಪೂರ್ವಕವಾಗಿ ಮಾಡಿದಂತೆ ತೋರುತ್ತದೆ. ಏಕೆಂದರೆ, ಇದರಿಂದ ರಾಜ್ಯ ಸರಕಾರಕ್ಕೆ, ಮಂತ್ರಿಗಳಿಗೆ ಮತ್ತು ಶಾಶಕರಿಗೆ ಬಿಬಿಎಂಪಿಯ ವ್ಯವಹಾರಗಳಲ್ಲಿ ಕಸ್ತಕ್ಷೇಪ ಮಾಡಲು ದಾರಿಯಾಗಿದೆ, ರೂ.೧೦,೦೦೦ ಕೋಟಿಗಿಂತಲೂ ಹೆಚ್ಚಿನ ಬಿಬಿಎಂಪಿಯ ಬಜೆಟ್ ನ ವಿನಿಯೋಗದಲ್ಲಿ ಕೈ ತೂರಿಸಲು ಸಾಧ್ಯವಾಗಿದೆ.
- **ಕೊಂಟ್ರಾಕ್ಟಗಳನ್ನು ಕೊಡುವದರಲ್ಲಿ ಹೊಣೆಗಾರಿಕೆಯಿಲ್ಲ:** ಬಿಬಿಎಂಪಿಯಲ್ಲಿ ಸರಕಾರ ಮತ್ತು ಮಂತ್ರಿಗಳ ಅನಗತ್ಯ ಪ್ರವೇಶದಿಂದಾಗಿ, ಕೊರ್ಪೊರೇಟರ್ ಗಳ ಪ್ರಕಾರ, ಕೊಂಟ್ರಾಕ್ಟ ಕೊಡುವ ವಿಷಯದಲ್ಲಿ ಅವರಿಗೆ ಸ್ವಾತಂತ್ರ್ಯವಿಲ್ಲ. ಎಲ್ಲಿ ಹೊಣೆಗಾರಿಕೆಯಿಲ್ಲವೊ, ಅಲ್ಲಿ ಕೊಂಟ್ರಾಕ್ಟ ಹಣವನ್ನು ದುರುಪಯೋಗಮಾಡಲು ಅನುಕೂಲತೆ ಇರುತ್ತದೆ.
- **ಕಳಪೆ ಕಾಮಗರಿಗಳು:** ಹೇಳಿ-ಕೇಳುವವರಿಲ್ಲದ ಈ ಪರಿಸ್ಥಿತಿಯಲ್ಲಿ, ಬಹಳ ವರ್ಷ ಗಳಿಂದ ಸಮಸ್ಯೆಗಳಾಗಿರುವ ರಸ್ತೆ ಕೆಲಸ, ಕಸ ತೆರವು, ನೀರಿನ ಚರಂಡಿ ಅಥವಾ ರಸ್ತೆ ದೀಪ ಮುಂತಾದ ಕಾಮಗಾರಿಗಳಲ್ಲಿ ಗುಣಮಟ್ಟ ತೀರ ಕಡಿಮೆಯಾಗಿರುವದು ಸಹಜವಾಗಿದೆ.
- **ವಿವರಗಳಿಲ್ಲದ ಹಣಕಾಸಿನ ಲೆಕ್ಕ-ಪತ್ರ:** ಬಿಬಿಎಂಪಿಯ ಪರಿಶೋಧಿತ ಲೆಕ್ಕ ಪತ್ರವನ್ನು ಹೆಚ್ಚಿನ ವಿವರಗಳಿಗೆ ಒಳಪಡಿಸದೆ ಅತ್ಯಂತ ಉನ್ನತ ಮಟ್ಟದಲ್ಲಿ ಮಾತ್ರ ಪ್ರಸ್ತುತಪಡಿಸಲಾಗುತ್ತದೆ. ವಾರ್ಡ್ ಮಟ್ಟದ ಬಜೆಟ್ ಹಂಚಿಕೆ ಮತ್ತು ಖರ್ಚಿನ ವಿವರಗಳನ್ನು ಅತ್ಯಂತ ಕಡಿಮೆ ಇಡಲಾಗಿದೆ. ಬಿಬಿಎಂಪಿ ವೆಬ್‌ಸೈಟ್‌ನಲ್ಲಿವರ್ಕ್ ಆರ್ಡರ್ ಮತ್ತು ಕೊಂಟ್ರಾಕ್ಟ್ ಗಳ ಮಾಹಿತಿ ಲಭ್ಯವಿದೆ, ಆದರೆ ಮಾಡಿದ ಕೆಲಸದ ಬಗ್ಗೆ ಬಹಳ ಕಡಿಮೆ ವಿವರವನ್ನು ಹೊಂದಿರುತ್ತವೆ.
- **ನಾಗರಿಕರಿಂದ ಮಹತ್ವವಾದ ಅಂಕಿ-ಅಂಶಗಳನ್ನು ಮರೆಮಾಚಿಡಲಾಗಿದೆ:** ಬೆಂಗಳೂರಿನ ನಾಗರಿಕರಿಂದ ಹಣ ಸಂಗ್ರಹ ಮಾಡಿದ್ದಾದರೂ, ಒಟ್ಟಾರೆ ಬಜೆಟ್‌ನ ವಿವರವಾದ ಅಂಶಗಳು,



info@nammabnp.org nammabnp.org +91 80 4719 0000 fb.com/nammabnp @nammabnp Namma.bnp

ವಾರ್ಡ್ವಾರು ಹಂಚಿಕೆ, ಖರ್ಚಿನ ವಿವರಗಳು ಮತ್ತು ಒಪ್ಪಂದಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಬೆಂಗಳೂರಿನ ನಾಗರಿಕರೊಂದಿಗೆ ಹಂಚಿಕೊಳ್ಳುವುದಿಲ್ಲ.

- **ಕಳಪೆ ಲೆಕ್ಕಪರಿಶೋಧನೆ:** ಆಯಾ ಹಣಕಾಸು ವರ್ಷಗಳು ಪೂರ್ಣಗೊಂಡ ಒಂದು ವರ್ಷದ ನಂತರವೂ ಲೆಕ್ಕಪರಿಶೋಧಿತ ಖಾತೆಗಳು ಲಭ್ಯವಾಗುತ್ತಿಲ್ಲ. ಬಿಬಿಎಂಪಿ ಈ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. 2010 ರಿಂದ ಆಂತರಿಕ ಲೆಕ್ಕಪರಿಶೋಧನೆ ನಡೆದಿಲ್ಲ. ಹಣಕಾಸಿನ ದುರುಪಯೋಗಕ್ಕಾಗಿ ಬಿಬಿಎಂಪಿಯನ್ನು ಕಠಿಣವಾಗಿ ಟೀಕಿಸಿದ್ದಾಗ್ಯೂ, ಸಿಎಜಿ ಆಡಿಟ್ ವರದಿಗಳನ್ನು ಗಂಭೀರವಾಗಿ ಪರಿಗಣಿಸಲಾಗಿಲ್ಲ.
- **ಮಾಹಿತಿ ಮತ್ತು ವ್ಯವಸ್ಥೆಗಳ ಕೊರತೆ:** ಆರ್ಥಿಕ ವಿವೇಕ ಮತ್ತು ದಕ್ಷತೆಗೆ, ತಂತ್ರಜ್ಞಾನದ ಸರಿಯಾದ ಬಳಕೆಯನ್ನೊಳಗೊಂಡ ಉತ್ತಮ ವ್ಯವಸ್ಥೆಯು ಅತ್ಯಗತ್ಯವಾಗಿವೆ. ಆಸ್ತಿ ತೆರಿಗೆ ಪಾವತಿಸಲು ಬದ್ಧವಾದ ಆಸ್ತಿಗಳ ಸಂಖ್ಯೆ ಮತ್ತು ಎಷ್ಟು ಮಂದಿ ಅದನ್ನು ಪಾವತಿಸಿದ್ದಾರೆ ಎಂಬುದರ ಬಗ್ಗೆ ಬಿಬಿಎಂಪಿಗೆ ಸರಿಯಾದ ದಾಖಲೆ ಇಲ್ಲ. ಅತ್ಯಗತ್ಯವಾದ ಅಂಕಿ-ಅಂಶಗಳೇ ಇಲ್ಲವಾಗಿವೆ.

## <u>ಬಿಬಿಎಂಪಿಯ ಹಣಕಾಸು ನಿರ್ವಹಣಾ ವ್ಯವಸ್ಥೆಗೆ ಬಿಎನ್ ಪಿಯ ಪ್ರಣಾಳಿಕೆ</u>

ಬಿಬಿಎಂಪಿಯ ಉತ್ತಮ ಹಣಕಾಸು ನಿರ್ವಹಣೆಗಾಗಿ ಬಿಎನ್‌ಪಿ ಈ ಕೆಳಗಿನ ಅಂಶಗಳಿಗೆ ಬದ್ಧವಾಗಿದೆ:

- **ತಂತ್ರಜ್ಞಾನದ ಬಳಕೆಯ ಮೂಲಕ ಉತ್ತಮ ಡೇಟಾ ನಿರ್ವಹಣೆ ಮತ್ತು ವ್ಯವಸ್ಥೆಗಳು:** ಜಿಪಿಎಸ್ ಮತ್ತು ಇತರ ತಂತ್ರಜ್ಞಾನಗಳ ಬಳಕೆ ಸೇರಿದಂತೆ ಸರಿಯಾದ ಸಮೀಕ್ಷೆಗಳ ಮೂಲಕ ನಗರದ ಎಲ್ಲಾ ಆಸ್ತಿಗಳ ಪಟ್ಟಿಯನ್ನು ಸರಿಯಾಗಿ ಸಿದ್ಧಪಡಿಸಲಾಗುವುದು. ಈ ಪಟ್ಟಿಯನ್ನು ಪ್ರತಿವರ್ಷ ಸರಿಯಾಗಿ ನಿರ್ವಹಿಸಲಾಗುವುದು ಮತ್ತು ನವೀಕರಿಸಲಾಗುವುದು. ಬೆಸ್ಕಾಮ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮುಂತಾದ ಸಂಸ್ಥೆಗಳ ಬಳಿ ಇರುವ ಮಾಹಿತಿಯೊಂದಿಗೆ ತಾಳೆ ಮಾಡಲಾಗುವದು. ಇದರಿಂದ ಅಸ್ತಿಗಳ ಬಗ್ಗೆ ನಿಖರವಾದ ಮಾಹಿತಿ ಸಿಗುವದಲ್ಲದೇ, ಪ್ರತಿ ಆಸ್ತಿಯನ್ನು ಆದಾಯ ಸಂಗ್ರಹದ ವ್ಯಾಪ್ತಿಗೆ ತರುವದಕ್ಕೆ ಸಹಾಯವಾಗುತ್ತದೆ.
- **ಪರಿಣಾಮಕಾರಿ ತೆರಿಗೆ ಮತ್ತು ಆದಾಯ ಸಂಗ್ರಹ:** ಮೇಲೆ ಹೇಳಿದ ರೀತಿಯಲ್ಲಿ ಸಂಗ್ರಹಿಸಿದ ಮಾಹಿತಿಯು, ಶುಲ್ಕ ಪಾವತಿಮಾಡುತ್ತಿರುವವರು ಮತ್ತು ಮಾಡದೇ ಇರುವವರ ಅಂಕಿ-ಅಂಶ ಗಳನ್ನು ಸಂಗ್ರಹಿಸಲು ನೆರವಾಗುತ್ತದೆ. ಡೀಫಾಲ್ಟರ್‌ಗಳನ್ನು ಪತ್ತೆಹಚ್ಚಲು ಮತ್ತು ದಂಡವನ್ನು ಒಳಗೊಂಡಂತೆ ಬಾಕಿ ಹಣವನ್ನು ಸಂಗ್ರಹಿಸಲು ವೃತ್ತಿಪರ ಏಜೆನ್ಸಿಗಳನ್ನು ನೇಮಿಸಲಾಗುವುದು. ಆಸ್ತಿಗಳು, ಸ್ವತ್ತುಗಳು, ವಾಹನ ನಿಲುಗಡೆ ಸ್ಥಳಗಳು, ವಾಣಿಜ್ಯ ಸಂಸ್ಥೆಗಳು ಇತ್ಯಾದಿ ವಿವಿಧ ಮೂಲಗಳಿಂದ ಹೆಚ್ಚಿನ ಮಟ್ಟದ ಆದಾಯವನ್ನು ನಿರ್ಧರಿಸಲು ಮತ್ತು ಸಂಗ್ರಹಿಸಲು ವ್ಯವಸ್ಥಿತ ವಿಧಾನವನ್ನು ಬಳಸಲಾಗುವುದು.
- **ಉತ್ತಮ ಬಜೆಟ್ ಪ್ರಕ್ರಿಯೆ:** ಮಂತ್ರಿಗಳು ಮತ್ತು ಶಾಸಕರು ಬಿಬಿಎಂಪಿ ಮೇಲೆ ಕಾನೂನುಬಾಹಿರ ನಿಯಂತ್ರಣವನ್ನು ಸಾಧಿಸುವ ಪ್ರಯತ್ನಗಳನ್ನು ತಡೆಯಲು ಕೊರತೆಯ ಬದಲು ಸಣ್ಣ ಹೆಚ್ಚುವರಿ ಬಜೆಟ್ ಸಿದ್ಧಪಡಿಸ ಲಾಗುವದು. ವಾರ್ಡ್‌ಗಳ ನಿಜವಾದ ಅವಶ್ಯಕತೆಯ ಬಗ್ಗೆ

ಯಾವುದೇ ಆಲೋಚನೆಯಿಲ್ಲದೆ ಟಾಪ್-ಡೌನ್ ವಿಧಾನವನ್ನು ತೆಗೆದುಕೊಳ್ಳುವ ಬದಲು, ವಾರ್ಡ್ ಮಟ್ಟದ ಬಜೆಟ್‌ಗಳಿಂದ ಒಟ್ಟಾರೆ ಬಜೆಟ್ ನ್ನು ನಿರ್ಮಿಸಲಾಗುವುದು.

- **ಉತ್ತಮ ಲೆಕ್ಕಪತ್ರ ವ್ಯವಸ್ಥೆ:** 'ಡಬಲ್ ಎಂಟ್ರಿ ಅಕೌಂಟಿಂಗ್' ಆಧಾರಿತ, ಗಣಕೀಕೃತ ಹಣಕಾಸು ನಿರ್ವಹಣಾ ವ್ಯವಸ್ಥೆಯ ಮೂಲಕ ಆದಾಯ ಮತ್ತು ವೆಚ್ಚವನ್ನು ಸೂಕ್ಷ್ಮವಾಗಿ ಗಮನಿಸಲಾಗುವದು. ವಾರ್ಡ್ ಮಟ್ಟದಲ್ಲಿ ಆದಾಯ ಮತ್ತು ಖರ್ಚು ಸ್ಥಿತಿಯನ್ನು ನೀಡಲು ಲೆಕ್ಕಪತ್ರ ವ್ಯವಸ್ಥೆಯನ್ನು ರಚಿಸಲಾಗುವದು. ಇದರಿಂದ, ವಾರ್ಡ್ ಸಮಿತಿಗಳಿಗೆ ಅಧಿಕಾರ ನೀಡಬಹುದು ಮತ್ತು ಸ್ಥಳೀಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬಹುದು.
- **ಸಮಯಕ್ಕೆ ಸರಿಯಾಗಿ ಲೆಕ್ಕಪತ್ರನ್ನು, ಆಡಲಿತ ವರದಿಗಳನ್ನು ಸಿದ್ಧಮಾಡುವುದು ಮತ್ತು ಅಡಿಟ್ ಮಾಡಿಸುವುದು:** ಅಕೌಂಟಿಂಗ್ ವರ್ಷ ಮುಗಿದ ೩ ತಿಂಗಳೊಳಗೆ ಬಿಬಿಎಂಪಿ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗುವುದು ಹಾಗೂ ವೃತ್ತಿಪರ ಲೆಕ್ಕಪರಿಶೋಧಕ ಸಂಸ್ಥೆಯಿಂದ ಸಮಂಜಸವಾದ ಸಮಯದೊಳಗೆ ಲೆಕ್ಕಪರಿಶೋಧನೆ ಮಾಡಿಸಲಾಗುವುದು. ವರ್ಷ ಮುಕ್ತಾಯಗೊಂಡ ೬ ತಿಂಗಳೊಳಗೆ ಪರಿಶೋಧಿತ ಮತ್ತು ಬಿಬಿಎಂಪಿ ಕೌನ್ಸಿಲ್ ಅನುಮೋದಿಸಿದ ಲೆಕ್ಕಪತ್ರಗಳನ್ನು ಸಾರ್ವಜನಿಕ ವಲಯದಲ್ಲಿ ಇಡಲಾಗುವುದು. ಅದಲ್ಲದೇ, ಉತ್ತಮ ನಿಯಂತ್ರಣ ಮತ್ತು ನಿರ್ವಹಣೆಗಾಗಿ ಆಂತರಿಕ ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ಸ್ಥಾಪಿಸಲಾಗುವುದು. ಆದಾಯ / ಖರ್ಚಿನ ಬಗ್ಗೆ ನಿಗಾ ಇಡಲು ಅಡಳಿತ ವರದಿಗಳನ್ನು ಪ್ರತಿ ತಿಂಗಳೂ ಸಿದ್ಧಪಡಿಸಲಾಗುವುದು.
- **ವೃತ್ತಿ ಅರ್ಹತೆ ಪಡೆದವರ ನೇಮಕ:** ಯಾವುದೇ ಲೆಕ್ಕಪತ್ರ ವ್ಯವಸ್ಥೆಯು ಅದನ್ನು ನಿರ್ವಹಿಸುವ ಜನರಷ್ಟೇ ವಿಶ್ವಾಸಾರ್ಹವಾಗಿರುತ್ತದೆ. ಆದ್ದರಿಂದ, ಲೆಕ್ಕಪತ್ರ ವ್ಯವಸ್ಥೆಯನ್ನು ನಿರ್ಮಿಸಲು ಮತ್ತು ನಿರ್ವಹಿಸಲು, ಸ್ವತಂತ್ರ, ಅರ್ಹ ಮತ್ತು ಅನುಭವೀ ಲೆಕ್ಕಪತ್ರಗಾರರನ್ನು ನೇಮಿಸಿಕೊಳ್ಳಲಾಗುವುದು.
- **ನಾಗರಿಕರೊಡನೆ ಸಂವಾದ ಮತ್ತು ಪಾರದರ್ಶಕತೆ:** ನಾಗರಿಕರಿಗೆ ತಮ್ಮ ಹಣವನ್ನು ಹೇಗೆ ಖರ್ಚು ಮಾಡಲಾಗುತ್ತಿದೆ ಎಂದು ತಿಳಿಯುವ ಹಕ್ಕಿದೆ. ಆದ್ದರಿಂದ, ಒಟ್ಟಾರೆ ಲೆಕ್ಕಪತ್ರಗಳ ಮತ್ತು ವಾರ್ಡ್ ಮಟ್ಟದ ಲೆಕ್ಕಪತ್ರಗಳ ಬಗ್ಗೆ ನಾಗರಿಕರಿಗೆ ಸಮಂಜಸವಾದ ಉನ್ನತ ಮಟ್ಟದ ವಿವರಗಳನ್ನು ಪ್ರಸ್ತುತಪಡಿಸಲಾಗುವುದು. ವಾರ್ಡ್ ಸಮಿತಿಗಳಮೂಲಕ, ನಾಗರಿಕರಿಗೆ ಲೆಕ್ಕಪತ್ರಗಳು, ಕಾರ್ಯಗಳು ಮತ್ತು ಕೈಗೊಂಡ ಯೋಜನೆಗಳ ವಿವರಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು.

****************